ಕಾರಣಕ್ಕೆ ವೇತನ ತಾರತಮ್ಯ ಇರುತ್ತದೆ. ಇದು ಒಬ್ಬರ ಪ್ರತಿಭೆ, ಸಂಶೋಧನೆ ಮತ್ತು ಸಂಶೋಧನಾ ಸೃಜನಶೀಲತೆಯನ್ನು ಅವಲಂಬಿಸಿರುತ್ತದೆ. ಕೆಲಸಕ್ಕೆ ಸೇರಿದವರಿಗೆ **tennure track** ಬಹಳ ಮುಖ್ಯ. ಆರು ವರ್ಷಗಳಲ್ಲಿ ಮುಂಬಡ್ತಿಯ ಹಾಗೂ ಕಾಯಂ ನೇಮಕಾತಿಯ ಅವಕಾಶ ಇರುತ್ತದೆ. ಇದೊಂದು ಅಗ್ನಿಪರೀಕ್ಷೆ. ವಿದ್ಯಾರ್ಥಿಗಳ ಮೌಲ್ಯಮಾಪನವೂ ಮುಖ್ಯ. ನಮ್ಮಿಂದ ಎಷ್ಟು ಪಾಠ, ಹೇಗೆ ಮತ್ತು ಕ್ರಮಬದ್ಧವಾಗಿ ಕಲಿತೆವು ಎಂದು ವಿದ್ಯಾರ್ಥಿಗಳು ಹೇಳಬೇಕು. ಈ ಮೌಲ್ಯಮಾಪನ ಮೂರು ಹಂತಗಳಲ್ಲಿ ನಡೆಯುತ್ತದೆ. ಇದು ನಿಷ್ಪಕ್ಷಪಾತವಾಗಿರುತ್ತದೆ. ಸಹೋದ್ಯೋಗಿಗಳೂ ನಮ್ಮ ಬಗ್ಗೆ ವರದಿ ಕೊಡಬೇಕು. ನಮ್ಮ ಕ್ಷೇತ್ರದಲ್ಲಿ ಪ್ರಪಂಚದ ಅಗ್ರಗಣ್ಯ ವಿದ್ವಾಂಸರಿಂದ ನಮ್ಮ ಸಂಶೋಧನೆಯ ಮೌಲ್ಯವನ್ನು ಕುರಿತು ವರದಿ ತರಿಸಿಕೊಳ್ಳುತ್ತಾರೆ. ಇದೇ ಟೆನ್ಯೂರಿಗೆ ಅತಿಮುಖ್ಯ ಒರೆಗಲ್ಲು. ನಂತರ ಮುಂಬಡ್ತಿ ಸಮಿತಿಗೆ ಹೋಗುತ್ತದೆ. ಅಲ್ಲಿ 17 ಜನ ಇರುತ್ತಾರೆ. ಅವರು ಒಪ್ಪಿದ ಮೇಲೆ ಇತರ ಸ್ತರಗಳಲ್ಲಿ ಪರಿಶೀಲನೆ ನಡೆಯುತ್ತದೆ. ಈ ಮೌಲ್ಯಮಾಪನ ಚಕ್ರ ತೀವ್ರ ತರವೇ ಇರುತ್ತದೆ. ಅಲ್ಲಿಯ ವಿದ್ಯಾರ್ಥಿಗಳು ನಿರ್ದಯರು. ಹಿಂಜರಿಕೆಯವರಲ್ಲ. ಯಾಕೆಂದರೆ ಅವರೂ ಶ್ರಮ ವಹಿಸಿ ಓದುವವರೇ ಆಗಿ ನಮ್ಮನ್ನು ಪ್ರಶ್ನಿಸುತ್ತಾರೆ. ನಾವು ಅದನ್ನು ತಪ್ಪು ತಿಳಿಯುವಂತಿಲ್ಲ. ಬಾಲ ಕತ್ತರಿಸುತ್ತೇನೆ ಎನ್ನುವಂತಿಲ್ಲ. ಹೀಗಾಗಿ ಅಲ್ಲಿನ ವಿಶ್ವವಿದ್ಯಾಲಯಗಳಲ್ಲಿ ವಿಜ್ಞಾನ ಸೇರಿದಂತೆ ಎಲ್ಲಾ ಜ್ಞಾನ ಶಾಖೆಗಳೂ ಬಹಳ ಮುಂದುವರಿದಿವೆ. ಓದಿನ ವಿಷಯದಲ್ಲಿ ಆಯ್ಕೆಯ ಅನುಕೂಲ ಬಹಳವಿರುತ್ತದೆ.

◆ **ಅಲ್ಲಿಯೂ ಓದಿದ ಯುವಕರಿಗೆ ನಿರುದ್ಯೋಗ ಸಮಸ್ಯೆ ಕಾಡುತ್ತಿದೆಯೆ?**

ಅಲ್ಲಿ ನಿರುದ್ಯೋಗದ ಸಮಸ್ಯೆ ಸದ್ಯಕ್ಕೆ ಇಲ್ಲ. ತುಂಬ ಉದ್ಯೋಗಾವಕಾಶಗಳಿವೆ. ಆದರೆ ಸಿಕ್ಕುವ ಉದ್ಯೋಗಕ್ಕೆ ಸಾಕಷ್ಟು ಆರ್ಥಿಕ ಪ್ರತಿಫಲ ಇರುವುದಿಲ್ಲ. ಅದು ಜೀವನಕ್ಕೆ ಸಾಲುವಂತಿರುವುದಿಲ್ಲ. ಹಾಗಾಗಿ ಅಲ್ಲಿಯೂ ಆರ್ಥಿಕ ಅಸಮಾನತೆ ಇದೆ. ಕಾಲಕಾಲಕ್ಕೆ ವೇತನ ಹೆಚ್ಚಳ ಇರುವುದಿಲ್ಲ. ವಿದ್ಯಾರ್ಥಿಗಳು ಕಾಲೇಜಿಗೆ ಹೋಗುವುದಕ್ಕೆ ಬ್ಯಾಂಕ್ ಸಾಲ ಮಾಡಬೇಕು. ಆ ಸಾಲ ತೀರಿಸಲು ಮುಂದೆ ಬಹಳ ಕಾಲ ದುಡಿಯಬೇಕು. ಹಾಗಾಗಿ ವಿದ್ಯಾರ್ಥಿಗಳು ಶಿಕ್ಷಣದ ಉಪಯೋಗವನ್ನು ಪ್ರಶ್ನೆ ಮಾಡುತ್ತಿದ್ದಾರೆ. ಅದರಿಂದ ಫಲವಿಲ್ಲ ಎನ್ನುತ್ತಿದ್ದಾರೆ. ಕಾಲೇಜಿಗೆ ಹೋಗಬೇಕೆ, ಓದಬೇಕೆ ಎಂಬ ಶಂಕೆ ಹತ್ತಿಕೊಂಡಿದೆ. ವಿದ್ಯಾರ್ಥಿಗಳು ಓದುವಲ್ಲಿ ತೆಗೆದುಕೊಂಡ ಸಾಲ ಮನ್ನಾ ಕೇಳುತ್ತಿದ್ದಾರೆ.

